
ಅಪ್ಲೋಡ್ ಮಾಡಬೇಕಿಲ್ಲರಿ?!... ಅದನ್ನ ಬಿಟಗೊಟ್ಟು ತಾವು ಅಂದು ತಿಂದ ತಿಂಡಿ, ಉಂಡ ಊಟ, ಕುಡಿದ ಛಾ ಕಾಫಿ ಫೋಟೊ ಹಾಕ್ತಾರ್ರಿ! ಎಂಥೆಂಥ ಮಂದಿಗೆ ಮಳ್ಳು ಹಿಡಿಸಿದ ಆ ಸಕ್ಕರಿ ಗುಡ್ಡ.

ಈ ಮಾರಿಬುಕ್ಕಿನ್ಯಾಗ ಎಷ್ಟು ಮಂದಿ ಗೆಳೆಯಾರಪಾ... ಅದರ ಮ್ಯಾಲೆ ಯಾರದೂ ಸೋಷಿಯಲ್ ಕೋಶಂಟು ನಿರ್ಧಾರ ಮಾತ್ರ ಮಾಡಬ್ಯಾಡ್ರಿ, ಮಾಡಿಕೋಬ್ಯಾಡ್ರಿ. ಅದು ನೀರ ಮೇಲಣ ಗುಳ್ಳಿ ನಿಜವಲ್ಲ... ಸರಿಯೇ? ಮೊನ್ನೆ ನನ್ನ ಮನಿಯವರ ಹುಟ್ಟಿದ ದಿನದಂದು ಯಾರ್‍ಯಾರೋ ಶುಭಾಶಯ ಕೋರಿದರು, ಮಾರಿಬುಕ್ಕಿನ್ಯಾಗ. ಅವರ ಬಾಲವಾಡಿಯ ಈಗಿನ ಪ್ರಿನ್ಸಿಪಾಲರೂ ಶುಭಾಶಯ ಹೇಳಿದ್ದರು. ಅದನ್ನು ನೋಡಿ ನನ್ನ ಮನಿಯವರಿಗೆ ನಂಬಲಾಗಲೇ ಇಲ್ಲ... ಶಿವನೇ ಈ ಮಾಯೆಯನ್ನೆಂತು ನಂಬುವುದೆಂದು ಅವರು ತಮ್ಮ ಮಾರಿಬುಕ್ಕನ್ನು ಮುಚ್ಚಿಟ್ಟುಬಿಟ್ಟರು. 45 ವರ್ಷಗಳಲ್ಲಿ ಒಮ್ಮೆಯೂ ಭೆಟ್ಟಿಯಾಗದವರು ಅವರಿಗೆ ವಿಶ್ ಮಾಡಿದ್ದು ಸತ್ಯ ಸಂಗತಿ. ಹೀಂಗs ಯಾರೂ ಯಾರೋ ಸಂಬಂಧ ಸೂತ್ರ ಇಲ್ಲದವರು ನಮ್ಮ ಹುಟ್ಟಿದಹಬ್ಬವನ್ನೋ, ಲಗ್ನದ ದಿನವನ್ನೋ ಆಚರಿಸಲಿಕ್ಕೆ ಸಹಾಯ ಮಾಡತಿರತಾರ. (ಹಂಗ ಮಾಡ್ರೀ ಅಂತ ಫೇಸ್‌ಬುಕ್ಕs ಅವರಿಗೆ ಹೇಳಿಕೊಡತಿರತದ).




ಇನ್ನ ಕೆಲವು ಮೂಶಂಡಿಗಳು ಇರತಾರ. ಇವರು ನಿಜ ಜೀವನದಾಗ ಯಾರ ಜೋಡೀನೂ ಛಂದಾಗಿ ನಕ್ಕೋತ ಒಂದು ಸಲಾನೂ ಮಾತಾಡಿರುದುಲ್ಲ. ಮಾರಿ ಬುಕ್ಕಿನ್ಯಾಗ ಸಾವಿರಾರು ಮಂದಿ ಇವರ ಆಪ್ತ ಗೆಳೆಯರು. ಮನ್ಯಾಗ, ಆಫೀಸಿನ್ಯಾಗ ಎಲ್ಲಾರೂ ಇವರ ಶತ್ರುಗಳು! ಇಂಥ ಮಂದಿ ಖಂಡಿತವಾಗ್ಯೂ ಇದ್ದಾರ. ತಾವು ಇರುವುದೊಂದು ತೋರುವುದೊಂದು... ಇಂಥ ಮಂದೀಗೆ ಈ ಮೊ ಹೊ ಅಗದೀ ಬೆಸ್ಟ್ ಜಾಗಾ. ತಾವು ಅಗದೀ ಪರೋಪಕಾರಿ ಇದ್ದಹಾಂಗ, ಕರುಣಾಮಯಿ ಇದ್ದಹಾಂಗ ಪೋಸು ಕೊಡತಿರತಾರ. ಆಫೀಸಿನ್ಯಾಗ, ಜೀವನದಾಗ ದುಷ್ಟಜೀವಿಗಳು... ಈ ಫೇಸ್‌ಬುಕ್ಕಿನ್ಯಾಗ ಮಹಾ ಕಷ್ಟಜೀವಿಗಳು! ಇನ್ನೊಂದು ಮಜಾ ಅಂದ್ರ ನಾವು ಅಗದೀ ದುಃಖದಾಗ ಇದ್ದಾಗೂನೂ ನಗೆಮುಖವನ್ನು ಇಲ್ಲೆ ತೋರಿಸಬಹುದು. ಯಾರದರ ಬಗ್ಗೆ ಮನಸ್ಸಿನ್ಯಾಗ ಭಾಳ ಅಸೂಯೆ ಹಗಿ ಇಟಗೊಂಡಿದ್ದರೂ ಇಲ್ಲೆ ಅಪ್ಪೂಟ ಅದರ ಗಂಧವೇ ಇಲ್ಲಾರಧಾಂಗ ವೇಷ ಕಟ್ಟ ಬಹುದು... ನಂಬಬ್ಯಾಡ್ರೀ... ಇದ ನಂಬಬ್ಯಾಡ್ರೀ! ನೀ ಈ ಮಾಯೆಯೊಳಗೊ... ಈ ಮಾಯೆ ನಿನ್ನೊಳಗೋ!... ಇಲ್ಲೆ ಒಂದ ಟೈಮಿನ್ಯಾಗ ನಾಲ್ಕೈದು ಮಂದೀ ಜೋಡಿ ಅಪ್ಪೂಟ ಬ್ಯಾರೆ ಬ್ಯಾರೆ ಭಾವನಿಯಿಂದ ಮಾತಾಡಬಹುದು. ಒಂದು ಕಡೆ ದುಃಖದ ಪೋಸು ಕೊಡುತ್ತಾ ಇನ್ನೊಂದು ಕಡೆ ರೊಮ್ಯಾಂಟಿಕ್ ಮಾತುಗಳನ್ನ ಅಡ್ತಿರಬಹುದು. ಬ್ಯಾಡ ಶಿವಾ... 'ಮೋ.ಹೋ'ದ ಮೋಹ.

ಏನೇನೂ ಸಾಹಿತ್ಯದ ಗಂಧವಿಲ್ಲದವರೂ ಇಲ್ಲೆ ಸೂಪರ್ ಹೀರೋ ಆಗಿರತಾರ. ಯಾರದೋ ಮನಿ ಮುಂದ ನಿಂತು. ಯಾರದೋ ಕಾರಿನ ಮುಂದ ನಿಂತು ತಮ್ಮದ ಅನ್ನೋ ಹಂಗ